ಈ) ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸುವ ಬಗ್ಗೆ ಪ್ರಯತ್ನ ನಡೆದಿದೆಯೇ?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಎರಡನೇ ಹಿಂದುಳಿದ ವರ್ಗಗಳ ಆಯೋಗವು 1984ನೇ ಸಾಲಿನಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ 4,72,968.

ಆ) ವಂಶಪಾರಂಪರ್ಯವಾಗಿ ಉಪ್ಪಿನ ತಯಾರಿಕೆ.

ಇ) ಇಲ್ಲ.

ಈ) ಇಲ್ಲ.

ಮೊರಾರ್ಜಿ ವಸತಿ ಶಾಲೆ ಪ್ರಾರಂಭಿಸುವುದು

884 (1135) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಅಸ್ತಿತ್ವದಲ್ಲಿ ಇರುವುದು ಯಾವ ಸ್ಥಳದಲ್ಲಿ;

ಆ) ಈಗಾಗಲೇ ಅಸ್ತಿತ್ವ ಇದ್ದಲ್ಲಿ ಸರ್ಕಾರದ ಆದೇಶ ಒದಗಿಸಬಹುದೇ?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಹಿಪ್ಪರಗಿ.

ಆ) ಸರ್ಕಾರದ ಆದೇಶ ಸಂಖ್ಯೆ : ಸಕಇ 189 ಪಕವಿ 97, ದಿನಾಂಕ: 03–09–1996 ರ ಪ್ರತಿ ಒದಗಿಸಿದೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 1996–97ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಶ್ರೀ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ಸಕನಿ:ವಶಾ: ಸಿಆರ್ 10:96–07 ದಿನಾಂಕ: 17–4–96, 15–5–96 ಮತ್ತು 23–5–96.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಸಮಾಜ ಕಲ್ಯಾಣ ನಿರ್ದೇಶಕರು 1996–97ನೇ ಸಾಲಿನ ಆಯವ್ಯಯ ಭಾಷಣದಂತೆ ಪ್ರಸಕ್ತ ಸಾಲಿನಲ್ಲಿ 40 ಶ್ರೀ ಮೊರಾರ್ಜಿದೇಸಾಯಿ ಮಾದರಿ ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ರಾಜ್ಯದಲ್ಲಿ ಪ್ರಾರಂಭಿಸಲು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಕಾರಣ ಈ ಆದೇಶ

ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 1996–97ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ 39 ಶ್ರೀ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳನ್ನು ಅನುಬಂಧದಲ್ಲಿ ನಮೂದಿಸಿರುವ ಸ್ಥಳಗಳಲ್ಲಿ ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿದೆ.

ಈ ಶಾಲೆಗಳಿಗೆ ಪ್ರವೇಶ, ಬೇಕಾಗುವ ಸಿಬ್ಬಂದಿ ವರ್ಗ ಮತ್ತು ತಗಲುವ ವೆಚ್ಚ ಇತ್ಯಾದಿಗಳ ಬಗ್ಗೆ ಪ್ರತ್ಯೇಕವಾಗಿ ವಿವರವಾದ ಆದೇಶವನ್ನು ಹೊರಡಿಸಲಾಗುವುದು.

ಈ ಆದೇಶವನ್ನು ಆದೇಶ ಸಂಖ್ಯೆ ಸಕಇ 451 ಪಕವಿ 95 ದಿನಾಂಕ: 7.3.1996ರಲ್ಲಿ ರಚಿಸಿರುವ ಅಧಿಕಾರಯುಕ್ತ ಸಮಿತಿಯು ದಿನಾಂಕ: 6–6–96 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ

(ಪಿ. ಮುದ್ದಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಮಾಜ ಕಲ್ಯಾಣ ಇಲಾಖೆ (ಪ್ರಭಾರ)

1) ಸಂಕಲನಕಾರರು ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇದನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.
2) ಮಹಾಲೇಖಪಾಲರು, (ಲೆಕ್ಕ ಮತ್ತು ತನಿಖೆ), ಕರ್ನಾಟಕ, ಬೆಂಗಳೂರು.
3) ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು "ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
5) ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ, ವೆಚ್ಚ-3, ವಿ.ಸೌಧ, ಬೆಂಗಳೂರು.

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ ಸಕಇ 189 ಪಕವಿ 96 ದಿನಾಂಕ: 3.9.96

ಕ್ರ ಸಂ.	ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾದ ಸ್ಥಳ, ತಾಲ್ಲೂಕು ಹಾಗೂ ಜಿಲ್ಲೆ.
1	ಮುಳಗುಂದ, ಗದಗ ತಾ: ಧಾರವಾಡ ಜಿಲ್ಲೆ.
2	ಹಳ್ಳಿಬೈಲ, ಹಾನಗಲ್ ತಾ: ಧಾರವಾಡ ಜಿಲ್ಲೆ.
3	ಮುಂಡಗೋಡ, ಮುಂಡಗೋಡ ತಾ: ಧಾರವಾಡ ಜಿಲ್ಲೆ.
4	ಸಿಂಗಟಾಲೂರು, ಮುಂಡರಗಿ ತಾ: ಧಾರವಾಡ ಜಿಲ್ಲೆ.
5	ಅಮರಗೋಳ
6	ಹಲುವಾಗಲ್ಲು, ಹರಪನಹಳ್ಳಿ ತಾ: ಬಳ್ಳಾರಿ ಜಿಲ್ಲೆ.
7	ತಿಮ್ಮಲಾಪುರ, ಮರಿಯಮ್ಮನಹಳ್ಳಿ, ಹೊಸಪೇಟೆ ತಾ: ಬಳ್ಳಾರಿ ಜಿಲ್ಲೆ.

8	ವಲ್ಲಭಾಪುರ, ಹಗರಿಬೊಮ್ಮನಹಳ್ಳಿ ತಾ: ಬಳ್ಳಾರಿ ಜಿಲ್ಲೆ.
9	ನಿಡಸೋಸಿ, ಹುಕ್ಕೇರಿ ತಾ: ಬೆಳಗಾಂ ಜಿಲ್ಲೆ.
10	ಎಲ್ಲಮ್ಮನಗುಡ್ಡ, ಸೌಂದತ್ತಿ ತಾ:ಬೆಳಗಾಂ ಜಿಲ್ಲೆ.
11	ಮುರಗುಂಡಿ, ಅಥಣಿ ತಾ: ಬೆಳಗಾಂ ಜಿಲ್ಲೆ.
12	ಹರಿಹರಪುರ, ಹೊಳೇನರಸೀಪುರ ತಾ: ಹಾಸನ ಜಿಲ್ಲೆ.
13	ಕಲ್ಲುಬೆಟ್ಟ, ಮೂಡಬಿದ್ರೆ, ದಕ್ಷಿಣ ಕನ್ನಡ ಜಿಲ್ಲೆ.
14	ಶಹಾಪುರ ತಾ: ಗುಲ್ಬರ್ಗಾ ಜಿಲ್ಲೆ.
15	ಅಫಜಲಪುರ, ಗುಲ್ಬರ್ಗಾ ಜಿಲ್ಲೆ.
16	ಲಿಂಗೇರಿ ಸ್ಟೇಷನ್, ಗುಲ್ಬರ್ಗಾ ಜಿಲ್ಲೆ.
17	ಲಿಂಗಸೂಗೂರು ಪಟ್ಟಣ, ರಾಯಚೂರು ಜಿಲ್ಲೆ.
18	ಔರಾದ್ ತಾ: ಬೀದರ್ ಜಿಲ್ಲೆ.
19	ಬೀದರ್
20	ವಿ.ವಿ.ಪುರ, ಹಿರಿಯೂರು ತಾ: ಚಿತ್ರದುರ್ಗ ಜಿಲ್ಲೆ.
21	ನಂದಿಗುಡಿ, ಹರಿಹರ ತಾ: ಚಿತ್ರದುರ್ಗ ಜಿಲ್ಲೆ.
22	ಮರಗೂರ ಸಕ್ಕರೆ ಕಾರ್ಖಾನೆ ಹತ್ತಿರ, ಇಂಡಿ ತಾ: ವಿಜಾಪುರ ಜಿಲ್ಲೆ.
23	ಮುಚಹೊಂಡಿ, ಬಾಗಲಕೋಟೆ ತಾ: ವಿಜಾಪುರ ಜಿಲ್ಲೆ.
24	ಲೋಕಾಪುರ, ಮುಧೋಳ ತಾ: ವಿಜಾಪುರ ಜಿಲ್ಲೆ
26	ನಾಲತವಾಡ, ಮುದ್ದೇಬಿಹಾಳ್ ತಾ: ವಿಜಾಪುರ ಜಿಲ್ಲೆ.
27	ಶಿರೂರ, ಬಾಗಲಕೋಟೆ ತಾ: ವಿಜಾಪೂರ ಜಿಲ್ಲೆ
28	ಕೊಪ್ಪ, ಚಿಕ್ಕಮಗಳೂರು ಜಿಲ್ಲೆ
29	ಕಾಮನಕೆರೆ, ಕಡೂರು ತಾ: ಚಿಕ್ಕಮಗಳೂರು ಜಿಲ್ಲೆ
30	ಸಿರಗಾವಲು, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.
31	ಕೆರಗೋಡ್, ಕೆ.ಆರ್.ಪೇಟೆ ತಾ: ಮಂಡ್ಯ ಜಿಲ್ಲೆ.
31	ಬೆಳಕವಾಡಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.
33	ಕೊಟಿಬೆಟ್ಟ, ನಾಗಮಂಗಲ ತಾ: ಮಂಡ್ಯ ಜಿಲ್ಲೆ
34	ದೊಡ್ಡಮರಳವಾಡಿ, ಕನಕಪುರ ತಾ: ಬೆಂಗಳೂರು ಗ್ರಾ ಜಿಲ್ಲೆ
35	ಎಸ್. ಹೊಸಕೋಟೆ, ನಂಜನಗೂಡು ತಾ: ಮೈಸೂರು ಜಿಲ್ಲೆ

36	ಹೊರೆಯಾಳ ಗ್ರಾಮ, ಬೇಗೂರು ಅಂಚೆ, ಗುಂಡ್ಲುಪೇಟೆ ತಾ: ಮೈಸೂರು ಜಿಲ್ಲೆ.
37	ಗಡಿಗವಾರಪಲ್ಲಿ (ತಿರುಮಲಾಪುರ) ಚಿಂತಾಮಣಿ ತಾ: ಕೋಲಾರ ಜಿಲ್ಲೆ.
38	ಸೋಮಯಾಜಲಪಲ್ಲಿ, ಶ್ರೀನಿವಾಸಪುರ ತಾ: ಕೋಲಾರ ಜಿಲ್ಲೆ.
39	ಕಾರಿಗನೂರು, ಚನ್ನಗಿರಿ ತಾ: ಶಿವಮೊಗ್ಗ ಜಿಲ್ಲೆ.

ಅಂಗವಿಕಲರ ಅಭಿವೃದ್ಧಿ ನಿಗಮ ಸ್ಥಾಪನೆ

885 (400) ಶ್ರೀ ಕೆ.ಜಿ. ಕುಮಾರಸ್ವಾಮಿ (ಶಿವಮೊಗ್ಗ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗವಿಕಲರ ಅಭಿವೃದ್ಧಿಗಾಗಿ ಪ್ರತ್ಯೇಕ ಅಂಗವಿಕಲರ ಅಭಿವೃದ್ಧಿ ನಿಗಮ, ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಇಂತಹ ನಿಗಮಕ್ಕೆ ವಹಿಸಬಹುದಾದ ಜವಾಬ್ದಾರಿಗಳೇನು?

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಸರ್ಕಾರದಿಂದ ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳಲ್ಲೂ ಶೇ.3ರ ಮೀಸಲಾತಿ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಶೇ.5ರ ಮೀಸಲಾತಿಯನ್ನು ಅಂಗವಿಕಲರಿಗೆ ನೀಡುವ ಬಗ್ಗೆ ಆದೇಶವಿದ್ದರೂ ಎಷ್ಟು ಜಿಲ್ಲೆಗಳಲ್ಲಿ ಈ ನಿರ್ದೇಶನಗಳನ್ನು ಪಾಲಿಸಿರುವುದಿಲ್ಲ (ಜಿಲ್ಲಾವಾರು ವಿವರ ನೀಡುವುದು)

ಇ) ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು 2001ರಲ್ಲಿಯೇ ಅನುಮತಿ ನೀಡಿದ್ದರೂ ಅಂಗವಿಕಲರೊಬ್ಬರಿಗೆ ಹಂಗಾಮಿ ನೇಮಕಾತಿ ಅವಕಾಶ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಂತಹ ಅಂಗವಿಲಕರಿಗೆ ನೀಡಬಹುದಾದ ಪರಿಹಾರ ಗಳೇನು? (ವಿವರ ಒದಗಿಸುವುದು);

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಸರ್ಕಾರದಿಂದ ಹಾಗೂ ಸ್ಥಳೀಯ ಸಂಸ್ಥೆಗಳು, ಪಂಚಾಯತ್, ಪುರಸಭೆ,